# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 14-11-2017ರ ಮಂಗಳವಾರದಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡೆವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ದಯಾನಂದ ಮಾನೆ | - | ಕುಲಪತಿಗಳು (ಪ್ರಭಾರ) ಹಾಗೂ ಅಧ್ಯಕ್ಷರು |
| 2. ಡಾ. ನಿಂಗಮ್ಮ ಸಿ.ಬೆಟ್ಸೂರ್ | - | ಸದಸ್ಯರು |
| 3. ಶ್ರೀ ಪುಷ್ಪಕುಮಾರ್ ಎಂ.ವಿ. | - | ಸದಸ್ಯರು |
| 4. ಡಾ. ಎಂ.ಸಿ.ನಟರಾಜ | - | ಸದಸ್ಯರು |
| 5. ಶ್ರೀ ಕೆ.ಎಂ.ಕಾಳೇಗೌಡ | - | ಸದಸ್ಯರು |
| 6. ಪ್ರೊ. ಡಿ. ನಂಜುಂಡಯ್ಯ | - | ಸದಸ್ಯರು |
| 7. ಶ್ರೀ ಲಯನ್ ಹೆಚ್. ರಮೇಶ್. | - | ಸದಸ್ಯರು |
| 8. ಶ್ರೀ ಮಹಮದ್ಅಬ್ದುಸ್ಸಲಾಂ | - | ಸದಸ್ಯರು |
| 9. ಶ್ರೀ ಕುಮಾರ್ | - | ಸದಸ್ಯರು |
| 10. ಶ್ರೀಮತಿ ಎಂ.ಎನ್.ಪೊನ್ನಮ್ಮ. | - | ಸದಸ್ಯರು |
| 11. ಶ್ರೀ ಎಂ.ಎಸ್.ಎಸ್. ಕುಮಾರ್ | - | ಸದಸ್ಯರು |
| 12. ಶ್ರೀ ಜಗದೀಶ್ಎಲ್. | - | ಸದಸ್ಯರು |
| 13. ಶ್ರೀಮತಿ ಸಹನಾ ಶಿವಪ್ಪ. | - | ಸದಸ್ಯರು |
| 14. ಪ್ರೊ. ಜೆ. ಸೋಮಶೇಖರ್ | - | ಸದಸ್ಯರು |
| ಕುಲಸಚಿವ(ಪರೀಕ್ಷಾಂಗ) | - | ಸದಸ್ಯರು |
| 15. ಶ್ರೀಮತಿ ಡಿ.ಭಾರತಿ. ಕೆ.ಎ.ಎಸ್ | - | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀಮತಿ ಶೃತಿತರುಣ್‌ಗಿರಿ - ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿದರು.

ಮುಂದುವರೆದು, ತುರ್ತಾಗಿ ಚರ್ಚಿಸಬೇಕಾದ ವಿಷಯ ವಿದ್ದುದರಿಂದ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಲಾಗಿದೆಯೆಂಬ ವಿಚಾರವನ್ನು ಸಭೆಗೆ ತಿಳಿಸಿದರು. ಅದರಂತೆ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

| | |
|---|---|
| **SPL Syn 2017.1** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಚಿಸಿರುವ "STATUTES RELATING TO DIRECT RECRUITMENT AND CAREER ADVANCEMENT SCHEME AND MISCELLANEOUS PROVISIONS TO IMPLEMENT THE UGC PAY SCALES REVISED FROM 1.01.2006 TO TEACHERS, LIBRARIAN AND PHYSICAL EDUCATION DIRECTORS AND OTHER ALLIED POSTS OF UNIVERSITY OF MYSORE" ಕರಡು ಅಧಿನಿಯಮವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| ತೀರ್ಮಾನ : | ಅನುಮೋದಿಸಲಾಯಿತು. |
| ವಿಷಯ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ 19-11-2017 ರಂದು ಪೂರ್ವಾಹ್ನ 11.00 ಗಂಟೆಗೆ ಭಾರತದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯನ್ನು ಅನಾವರಣ ಮತ್ತು ಶ್ರೀ ದೇವರಾಜ ಅರಸು ಭವನದ ಉದ್ಘಾಟನೆಯ ಕಾರ್ಯಕ್ರಮದ ಬಗ್ಗೆ.** |
| ತೀರ್ಮಾನ : | 1. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 19-11-2017ರಂದು ಪೂರ್ವಾಹ್ನ 11.00 ಗಂಟೆಗೆ ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಯ ಅನಾವರಣವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಿದ ನಂತರ ಸಮಾರಂಭವನ್ನು ಮಾನಸಗಂಗೋತ್ರಿಯ ಆವರಣದಲ್ಲಿರುವ ನಾಲ್ವಡಿಕೃಷ್ಣ ರಾಜಒಡೆಯರ್ ಸಭಾಂಗಣದಲ್ಲಿ ಏರ್ಪಡಿಸುವುದು ಹಾಗೂ ಶ್ರೀ ದೇವರಾಜ ಅರಸು ಭವನದ ನೂತನ ಕಟ್ಟಡದ ಉದ್ಘಾಟನೆಯನ್ನು ಡಾ. ಹೆಚ್.ಸಿ.ಮಹಾದೇವಪ್ಪ ಅವರು ಗಣಕಯಂತ್ರವನ್ನು ಒತ್ತುವ ಮೂಲಕ ಉದ್ಘಾಟಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>2. ಸದರಿ ಸಮಾರಂಭಕ್ಕೆ ಭಾಗವಹಿಸಲು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಕುಲಸಚಿವರು ಪೂರ್ವಭಾವಿ ಸಭೆಕರೆದು ಕಮಿಟಿಗಳನ್ನು ಮಾಡಿಕೊಂಡು ಅವರಿಂದ ಕೆಲಸ ನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದು.<br>3. ಭಾರತದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಯ ಅನಾವರಣ ಮತ್ತು ಶ್ರೀ ದೇವರಾಜ ಅರಸು ಭವನದ ಉದ್ಘಾಟನೆಯ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಎಲ್ಲಾ ಖರ್ಚು-ವೆಚ್ಚಗಳಿಗೆ "IDF ಶೀರ್ಷಿಕೆ" ವಿಶ್ವವಿದ್ಯಾನಿಲಯ ಕಾರ್ಯಕ್ರಮ ಹಾಗೂ ಸಮಾರಂಭ, University Functions Celebration" ಶೀರ್ಷಿಕೆಯಿಂದ ಭರಿಸುವುದು ಹಾಗೂ ಹಣಕಾಸು ಅಧಿಕಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು.<br>4. ಈ ಮೇಲ್ಕಂಡ ಕಾರ್ಯಕ್ರಮಗಳಿಗೆ ಮುಖ್ಯ ಅತಿಥಿಗಳಾಗಿ ವಿಧಾನ ಸಭಾ ಸದಸ್ಯರು, ಲೋಕಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತು ಸದಸ್ಯರೊನ್ನಳಗೊಂಡಂತೆ ಗಣ್ಯರು ಆಗಮಿಸುವುದರಿಂದ ಅವರಿಗೆ ಆಸನದ ವ್ಯವಸ್ಥೆಯನ್ನು ಮೀಸಲಿಡುವುದು. ಯಾವುದೇ ಗಲಾಟೆಗಳಿಗೆ ಆಸ್ಪದವಾಗದಂತೆ, ಶಿಷ್ಟಾಚಾರ ಪಾಲನೆ ಸಂಬಂಧದ ಕ್ರಮಗಳನ್ನು ಕುಲಸಚಿವರು ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.<br>5. ದಿನಾಂಕ 19.11.2017 ರಂದು ಮೈಸೂರು ವಿಶ್ವವಿದ್ಯಾನಿಲಯದ ಬಟವಾಡೆ ಅಧಿಕಾರಿಗಳು, ಎಲ್ಲಾ ಘಟಕ ಕಾಲೇಜುಗಳು, ಆಡಳಿತ ಕಛೇರಿಗಳು, ಎಲ್ಲಾ ಅಧ್ಯಯನ ವಿಭಾಗಗಳ ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು, ಸಂಶೋಧಕರು ಸಮಾರಂಭದಲ್ಲಿ ಕಡ್ಡಾಯವಾಗಿ ಭಾಗವಹಿಸುವ ಸಂಬಂಧ ಕ್ರಮವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 264 ಅಧ್ಯಾಪಕ ಹಾಗೂ 154 ಅಧ್ಯಾಪಕೇತರರ ಹುದ್ದೆಗಳು ಭರ್ತಿಯಾಗದೇ ಖಾಲಿ ಉಳಿದಿರುವುದರಿಂದ, ಇವುಗಳನ್ನು ಶೀಘ್ರದಲ್ಲಿ ಭರ್ತಿ ಮಾಡುವ ಬಗ್ಗೆ ಚರ್ಚಿಸಿದ ಸಭೆಯು ಸರ್ಕಾರದ ನಿರ್ದೇಶನದಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುಮತಿ ದೊರೆತ ನಂತರ ಪತ್ರಿಕೆಗಳಿಗೆ ಜಾಹಿರಾತು ಹೊರಡಿಸಲು ಕ್ರಮಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು.

2. ರಜಾ ದಿನಗಳಂದು ಕೆಲಸ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳಿಗೆ 3-4 ವರ್ಷಗಳಿಂದ ಗೌರವ ವೇತನವನ್ನು ನೀಡದಿರುವ ಬಗ್ಗೆ ಸದರಿ ಉಪನ್ಯಾಸಕರುಗಳು ಕೋರ್ಟ್‌ನಲ್ಲಿ ದಾವೆ ಹೂಡಿರುವುದರ ಬಗ್ಗೆ ಚರ್ಚಿಸಿದ ಸಭೆಯು ಅವರುಗಳಿಗೆ ಗೌರವ ವೇತನವನ್ನು ನೀಡಲು ಸಾಧ್ಯವಿಲ್ಲವಾದ್ದರಿಂದ ಕೋರ್ಟ್‌ನ ನಿರ್ದೇಶನದಂತೆ ಕ್ರಮಕೈಗೊಳ್ಳಲಾಗುವುದೆಂದು ಸಿಂಡಿಕೇಟ್ ತೀರ್ಮಾನಿಸಿತು.

3. ಪಿಎಚ್.ಡಿ. ಪದವಿಯ ಪ್ರವೇಶಾತಿಗಾಗಿ ಸಿದ್ಧಪಡಿಸಲಾಗುವ ರಾಜ್ಯಶಾಸ್ತ್ರ ಪ್ರಶ್ನೆಪತ್ರಿಕೆಯ ಬಗ್ಗೆ ಹಲವಾರು ವಿದ್ಯಾರ್ಥಿಗಳು ಲೋಪದೋಷಗಳಿರುವುದರ ಬಗ್ಗೆ ಮನವಿ ಸಲ್ಲಿಸಿರುವುದರ ಬಗ್ಗೆ ಚರ್ಚಿಸಿದ ಸಭೆಯು 7 ದಿವಸಗಳೊಳಗಾಗಿ ಉತ್ತರ ನೀಡುವಂತೆ ನೋಟೀಸ್ ಜಾರಿ ಮಾಡಿ ಅನಂತರ ಪರಿಶೀಲಿಸಿ ಶಿಸ್ತು ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

4. ಶ್ರೀ ಜಗದೀಶ್ ಎಲ್. ಇವರು ಮಾತನಾಡಿ, ಮಾನಸಗಂಗೋತ್ರಿಯ ಕ್ಯಾಂಪಸ್‌ನಲ್ಲಿರುವ ವಾಣಿಜ್ಯ ವಿಭಾಗಕ್ಕೆ ಪೀಠೋಪಕರಣಗಳು ಹಾಗೂ ಮೂಲಭೂತ ಸೌಕರ್ಯವನ್ನು ಶೀಘ್ರವಾಗಿ ಒದಗಿಸುವಂತೆ ಸಭೆಯನ್ನುಕೋರಿದರು.

ಕುಲಸಚಿವರು ಮಾತನಾಡುತ್ತಾ, ತಮ್ಮ ಅಧಿಕಾರದ ಅವಧಿಯಲ್ಲಿ ಮಾನ್ಯ ಕುಲಪತಿಯವರು ಆಡಳಿತದಲ್ಲಿ ತಮಗೆ ಸೇವೆ ಸಲ್ಲಿಸಲು ಉತ್ತಮ ಸಹಕಾರವನ್ನು ನೀಡಿದ್ದಕ್ಕಾಗಿ ವಂದಿಸುತ್ತಾ ಅವರಿಗೆ ಇನ್ನೂ ಮುಂದೆಯೂ ಉನ್ನತ ಹುದ್ದೆಗಳು ಸಿಗಲಿ, ವಿಶ್ವವಿದ್ಯಾನಿಲಯದ ಏಳಿಗೆಗೆ ಅಭಿವೃದ್ಧಿ ಪರ ಕೆಲಸ ನಿರ್ವಹಿಸಲಿ ಎಂದು ಆಶಿಸಿದರು.

ನಂತರ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಸಹ ಕುಲಸಚಿವರ ಹೇಳಿಕೆಯನ್ನು ಅನುಮೋದಿಸಿದರು.

ಕುಲಸಚಿವರು (ಪರೀಕ್ಷಾಂಗ) ಇವರು ಮಾನ್ಯ ಕುಲಪತಿಯವರ ಬಗ್ಗೆ ಮಾತನಾಡುತ್ತಾ, ಮಾನ್ಯ ಕುಲಪತಿಯವರು ಅವರು ಟೇಬಲ್ ಮೇಲೆ ಬರುವ ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಂತಹ ಯಾವುದೇ ಕಡತಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುತ್ತಿದ್ದರು. ಇದು ಅವರ ಕಾರ್ಯದಕ್ಷತೆಯನ್ನು ತೋರುತ್ತದೆ. ಅಂತಹ ಕೆಲವೇ ಕೆಲವು ಕುಲಪತಿಯವರಲ್ಲಿ ನೀವು ಒಬ್ಬರಾಗಿದ್ದು ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಹಲವಾರು ಸುಧಾರಣೆಗಳನ್ನು ಮಾಡಿರುತ್ತಾರೆ. ಇದೇ ರೀತಿಯಲ್ಲಿ ಅವರು ತಮ್ಮ ವಿಭಾಗದಲ್ಲಿ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು, ಹಾಗೂ ಮಾನ್ಯರು ವಿಶ್ವವಿದ್ಯಾನಿಲಯಕ್ಕೆ ಒಂದು ಹೊಸ ಸ್ಪರ್ಶವನ್ನು ನೀಡಿದ್ದು, ಇದಕ್ಕೆ ಸಿಂಡಿಕೇಟ್ ಸದಸ್ಯರುಗಳು ಸ್ಫೂರ್ತಿಯನ್ನು ನೀಡಿರುತ್ತಾರೆ. ಇದಕ್ಕಾಗಿ ನಾನು ವೈಯಕ್ತಿಕವಾಗಿ ಮಾನ್ಯ ಕುಲಪತಿಯವರ ಸೇವೆಯನ್ನು ಶ್ಲಾಘಿಸುತ್ತೇನೆಂದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ತಾವು ಕುಲಪತಿಯಾಗಿ ಅಧಿಕಾರವನ್ನು ವಹಿಸಿಕೊಂಡು 9 ತಿಂಗಳುಗಳಾಗಿದ್ದು, ತಮ್ಮ ಅಧಿಕಾರವಧಿ ನವೆಂಬರ್ 22ಕ್ಕೆ ಕೊನೆಗೊಳ್ಳುವುದರಿಂದ, ಇಷ್ಟು ದಿವಸ ಆಡಳಿತ ಸುಗಮವಾಗಿ ಸಾಗಲು ಸಹಕರಿಸಿದ್ದಕ್ಕಾಗಿ ಸಭೆಗೆ ವಂದಿಸಿ, ತಮ್ಮಿಂದ ಏನಾದರೂ ತೊಂದರೆಯಾಗಿದ್ದರೆ ದಯವಿಟ್ಟು ಕ್ಷಮಿಸಬೇಕೆಂದರು.

ಕೊನೆಯಲ್ಲಿ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿ ಮತ್ತು ಅಧ್ಯಕ್ಷರು**